**ಕರ್ನಾಟಕ ಸರ್ಕಾರ**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು**
**ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03**
**ದೂರವಾಣಿ ಸಂಖ್ಯೆ: 2334615, 23562283, ಫ್ಯಾಕ್ಸ್: 080–23347670**

ಸಂಖ್ಯೆ:ಕೆ.ಎಸ್.ಕ್ಯು.ಎ.ಎ.ಸಿ/ಒಲಂಪಿಯಾಡ್/23/2013–14 ದಿನಾಂಕ: 20/08/2013

## ಜ್ಞಾಪನ

ವಿಷಯ: ತರಗತಿ 6 ಮತ್ತು 9 ರ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಒಂಪಿಯಾಡ್ ಪರೀಕ್ಷೆ ನಡೆಸುವ ಬಗ್ಗೆ.

ಉಲ್ಲೇಖ: 1) ರಾಜ್ಯಯೋಜನಾ ನಿರ್ದೇಶಕರ ಪತ್ರ ಸಂಖ್ಯೆ:ಸ.ಶಿ.ಅ/ಒಲಂಪಿಯಾಡ್ ಪರೀಕ್ಷೆ/2013–14, ದಿನಾಂಕ: 17–08–2013.

2) ಸರ್ವಶಿಕ್ಷಣ ಅಭಿಯಾನ ಕಛೇರಿ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಒಲಂಪಿಯಾಡ್–ಪರೀಕ್ಷೆ/2013–14, ದಿನಾಂಕ: 01–08–2013.

**********************

ಉಲ್ಲೇಖ 1 ರ ಪತ್ರದಲ್ಲಿ ಮಾನ್ಯ ಯೋಜನಾ ನಿರ್ದೇಶಕರು 2013–14 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ 6 ಮತ್ತು 9 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಒಲಂಪಿಯಾಡ್ ಪರೀಕ್ಷೆಯನ್ನು ಬ್ಲಾಕ್ ಹಂತ, ಜಿಲ್ಲಾ ಹಂತ ಹಾಗೂ ರಾಜ್ಯ ಹಂತಗಳಲ್ಲಿ ನಡೆಸಿ ವರದಿ ನೀಡುವ ಜವಾಬ್ದಾರಿಯನ್ನು ಈ ಕಛೇರಿಗೆ ನೀಡಿರುತ್ತಾರೆ. ಈ ಪರೀಕ್ಷೆಯ ಸಂಬಂಧ ಈಗಾಗಲೇ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಉಲ್ಲೇಖ 2 ರ ಸುತ್ತೋಲೆಯಂತೆ ಶಾಲಾ ಹಂತದ ಪರೀಕ್ಷೆಯನ್ನು ದಿನಾಂಕ: 31–08–2013 ರಂದು ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಏಕಕಾಲದಲ್ಲಿ ನಡೆಸಿ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ ಪ್ರತೀ ಶಾಲೆಯಿಂದ 5% ರಷ್ಟು ಅರ್ಹ ವಿದ್ಯಾರ್ಥಿಗಳನ್ನು ಬ್ಲಾಕ್ ಹಂತದ ಪರೀಕ್ಷೆಗೆ ಹಾಜರಾಗಲು ವ್ಯವಸ್ಥೆ ಮಾಡುವುದು. ಬ್ಲಾಕ್ ನೋಡಲ್ ಅಧಿಕಾರಿಗಳಿಗೆ ಈ ಬಗ್ಗೆ ಸ್ಪಷ್ಟ ನಿರ್ದೇಶನ ನೀಡುವುದು.

ಬ್ಲಾಕ್ ಹಂತಕ್ಕೆ ಅರ್ಹತೆ ಪಡೆದ ಮಕ್ಕಳ ವಿವರವನ್ನು ಉಲ್ಲೇಖ–2ರ ಜ್ಞಾಪನದಲ್ಲಿ ತಿಳಿಸಿರುವಂತೆ ಕೆಳಕಂಡ ನಮೂನೆಯಲ್ಲಿ ಸಾಫ್ಟ್ ಕಾಪಿಯನ್ನು ಎಕ್ಸೆಲ್‌ನಲ್ಲಿ ಇಂಗ್ಲೀಷ್‌ನಲ್ಲಿ ಸಿದ್ಧಪಡಿಸಿ ದಿನಾಂಕ: 06–09–2013 ರೊಳಗೆ ksqaacbangalore@gmail.com ಮೂಲಕ ಈ ಕಛೇರಿಗೆ ಕಳುಹಿಸುವುದು.

## ನಮೂನೆ

District Name: Block Name:

| Sl.No | Register Number | Student Name | Marks | | Class | School Name |
|---|---|---|---|---|---|---|
| | | | Science | Maths | | |
| | | | | | | |

(ನೋಂದಣಿ ಸಂಖ್ಯೆಯನ್ನು ಎಸ್.ಎಸ್.ಎ. ಜ್ಞಾಪನದಲ್ಲಿ ತಿಳಿಸಿರುವಂತೆ ನೀಡುವುದು. **ಉದಾಹರಣೆ:**

| | | | | | |
|---|---|---|---|---|---|
| 0 | 1 | 01 | 0 | 0 | 1 |

Dist code Block code Student serial No.

ಬ್ಲಾಕ್ ಹಂತದ ಒಲಂಪಿಯಾಡ್ ಪರೀಕ್ಷೆಯು ದಿನಾಂಕ: 21-09-2013 ರಂದು ನಡೆಯಲಿದ್ದು, ಸೂಚಿತ ದಿನಾಂಕದೊಳಗೆ ವಿದ್ಯಾರ್ಥಿಗಳ ವಿವರದೊಂದಿಗೆ ಪ್ರಶ್ನೆ ಪತ್ರಿಕೆ ಬೇಡಿಕೆ ಸಲ್ಲಿಸುವುದು. ವಿಳಂಬವಾದಲ್ಲಿ ಓ.ಎಂ.ಆರ್.ಗಳು ಮತ್ತು ಪ್ರಶ್ನೆ ಪತ್ರಿಕೆಗಳನ್ನು ಸಕಾಲಕ್ಕೆ ಸರಬರಾಜು ಮಾಡಲಾಗುವುದಿಲ್ಲ. ತಡವಾಗಿ ನೀಡುವ ಮಾಹಿತಿಗಳಿಂದ ಆಗುವ ತೊಂದರೆಗಳಿಗೆ ಬ್ಲಾಕ್ ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಕಾರ್ಯವನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ದಿನಾಂಕ: 06-09-2013 ರೊಳಗೆ ಮಾಹಿತಿಗಳನ್ನು ನೀಡಲು ತಿಳಿಸಿದೆ.

ಸದರಿ ಕಾರ್ಯಕ್ಕೆ ಈ ಕಛೇರಿಯ ಶ್ರೀ.ಎಸ್.ಆರ್.ಚಂದ್ರಯ್ಯ, ಕಿರಿಯ ಕಾರ್ಯಕ್ರಮಾಧಿಕಾರಿ ರವರನ್ನು ರಾಜ್ಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದ್ದು, ದೂರವಾಣಿ ಸಂಖ್ಯೆ: 9448999417 ರಲ್ಲಿ ಸಂಪರ್ಕಿಸಲು ತಿಳಿಸಿದೆ.

21/8/13

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ.
ಬೆಂಗಳೂರು.

ಪ್ರತಿಯನ್ನು,

1) ಮಾನ್ಯ ರಾಜ್ಯಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನರವರಿಗೆ ಮಾಹಿತಿಗಾಗಿ.
2) ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರಿಗೆ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ಜಿಲ್ಲೆಗಳ ಒಲಂಪಿಯಾಡ್ ನೋಡಲ್ ಅಧಿಕಾರಿಗಳಿಗೆ ತುರ್ತು ಕ್ರಮಕ್ಕಾಗಿ.
4) ಕಛೇರಿ ಪ್ರತಿ.